**ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

**ಸುತ್ತೋಲೆ**

ನಂ.KU/Hort./Sale/23-24/ ದಿನಾಂಕ: 7-12-23

ಕ.ವಿ.ವಿ ಆವರಣದಲ್ಲಿ ಮತ್ತು ಕರ್ನಾಟಕ ಕಾಲೇಜು ಆವರಣದಲ್ಲಿ ಕಟ್ಟಡಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಗಿಡಗಳನ್ನು ಟೆಂಡರ/ಬಹಿರಂಗ ಹರಾಜನ್ನು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ. ವಿವರಣೆ ಈ ಕೆಳಗಿನಂತಿದೆ.

| ಲಾಟ ಸಂಖೆ | ಗಿಡಗಳ ವಿವರಣೆ | ಹರಾಜಿನಲ್ಲಿಭಾಗವಹಿಸಲು ಕಟ್ಟಬೇಕಾದ ಠೇವಣಿ | ಸುರಕ್ಷಾ ಠೇವಣಿ |
|---|---|---|---|
| 1 | ಕರ್ನಾಟಕ ವಿಶ್ವವಿದ್ಯಾಲಯದ ಮುಖ್ಯೆ ಕಟ್ಟಡ ಹಿಂದಿನ ಭಾಗದಲ್ಲಿರುವ ರೇನ ಟ್ರಿ- 01 ಒಟ್ಟು-01 ಗಿಡ | 12,000=00 | 1000=00 |
| 2 | ಕರ್ನಾಟಕ ಕಾಲೇಜು ಆವರಣದ ಜಿಯಾಗ್ರಾಫಿ ವಿಭಾಗದ ಮುಂದಿರುವ ರೇನ ಟ್ರಿ- 01. P.U. ಕಾಲೇಜಿನ ಗೇಟ ಮುಂದಿರುವ ಪೆಲ್ಟೋಫಾರ್ಮ-01 ಒಟ್ಟು-02 ಗಿಡ | 12,000=00 | 1000=00 |

**ಟೆಂಡರ ಕರಾರುಗಳು :**

1. ಮೇಲೆ ತಿಳಿಸಿದ ಆವರಣದ ಸ್ಥಳಗಳಲ್ಲಿ ನಿಂತ ಗಿಡಗಳನ್ನು ಚನ್ನಾಗಿ ಗುರುತಿಸಿಕೊಂಡು **Finance Officer, Karnatak University, Dharwad** ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಪಸಲು ಠೇವಣಿ ಹಣದ ಡಿ.ಡಿ. ಯೊಂದಿಗೆ ತಮ್ಮ ಟೆಂಡರ ದರವನ್ನು ನಿಗದಿತ **ಫಾರ್ಮ** ನಲ್ಲಿ ಬರೆದು ಹಾಕಬೇಕು. ಫಾರ್ಮಗಳನ್ನು ರೂ. **3000=00** + CGST and SGST **540=00 (18 %)** = ಒಟ್ಟು ರೂ. **3540=00**. ರೂ. **3000=00** ಗಳನ್ನು ಚಲನ ಮೂಲಕ ಬ್ಯಾಂಕಿಗೆ ತುಂಬಿ ಉದ್ಯಾನ ವಿಭಾಗದಲ್ಲಿ ತೋರಿಸಿದಾಗ ಟೆಂಡರ ಫಾರ್ಮ ಕೊಡಲಾಗುವದು. CGST and SGST **(540=00)** ಹಣವನ್ನು ನಗದು ರೂಪದಲ್ಲಿ ನೀಡಬೇಕು. ಸದರ ಪ್ರಕ್ರಿಯಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಫಾರ್ಮ ಪಡೆಯಲೇ ಬೇಕು ಮತ್ತು ಟೆಂಡರ ಬಾಕ್ಸನಲ್ಲಿ ಹಾಕಬೇಕು. ಟೆಂಡರ ಫಾರ್ಮ ತುಂಬಿ ಟೆಂಡರ ಡಬ್ಬದಲ್ಲಿ ಹಾಕದೇ ನೇರವಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಫಾರ್ಮಗೆ ಸಂಬಂಧಿಸಿದಂತೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕಾಗಿ ಮರಳಿಸಲಾಗುವದಿಲ್ಲಾ. **ಟೆಂಡರದಾರರು ಕಡ್ಡಾಯವಾಗಿ ಅಧಿಕೃತ ವಿಳಾಸದ ಪುರಾವೆ ಒದಗಿಸಬೇಕು(ಆದಾರ ಕಾರ್ಡ/ವೋಟರ ಕಾರ್ಡ) ಮತ್ತು ಪ್ಯಾನ ಕಾರ್ಡ ಲಗತ್ತಿಸಬೇಕು.**

2. ದಿನಾಂಕ **18-12-2023** ರಂದು ಮದ್ಯಾನ **3.00** ಗಂಟೆ ಒಳಗಾಗಿ ಉದ್ಯಾನ ಇಲಾಖೆಯಲ್ಲಿರುವ ಸೀಲು ಮಾಡಿದ ಟೆಂಡರ ಪೆಟ್ಟಿಗೆಯಲ್ಲಿ ಹಾಕಬೇಕು ತದ ನಂತರ ಬಂದವರನ್ನು ಪರಿಗಣಿಸಲಾಗುವದಿಲ್ಲಾ. ಮತ್ತು ಅದೇ ದಿವಸ ಮದ್ಯಾಹ್ನ **3.30** ಗಂಟೆಗೆ ಬಹಿರಂಗು ಹರಾಜು ಏರ್ಪಡಿಸಲಾಗುವದು. ಮೊಹರಾದ ಟೆಂಡರಗಳನ್ನು ಹರಾಜಿನ ನಂತರ ತೆರೆದು ಹೆಚ್ಚಿನ ಬೇಡಿಕೆದಾರರಿಗೆ, ಪಸಲು ಹರಾಜು ಸಮೀತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಗಿಡಗಳನ್ನು ನೀಡಲಾಗುವದು.

3. ಟೆಂಡರ: ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಪಸಲು ಪಡೆದವರು, ಪಸಲು ಹರಾಜು ಸಮಿತಿ ಸದಸ್ಯರು ಒಪ್ಪಿಗೆ ನೀಡಿದಲ್ಲಿ ಪಸಲು ಮೊತ್ತದಲ್ಲಿ ಠೇವಣಿ ಹಣ ವಜಾಗೊಳಿಸಿ ಉಳಿದ ಹಣದ **75% ಹಣವನ್ನು** ಮರು ದಿನ ಬ್ಯಾಂಕಿನ ಅವಧಿಯೊಳಗ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅದೇ ವೇಳೆಗೆ ತಾವು ಕೊಂಡ ಪಸಲುಗಳನ್ನು ಎರಡನೇಯ ಬೇಡಿಕೆದಾರರಿಗೆ ನೀಡಬಹುದಾಗಿದೆ. ಅದಕ್ಕೆ ತಮ್ಮ ಯಾವುದೇ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.

4. ಟೆಂಡರ:ಬಹಿರಂಗ ಹರಾಜು ದರಗಳು ಮೇಲಾಧಿಕಾರಿಗಳಿಂದ ಅಂಗಿಕೃತವಾಗಿ ಬಂದ ನಂತರ ಇನ್ನೂಳಿದ ಹಣವನ್ನು ತುಂಬಲು ಸೂಚಿಸಿದಾಗ ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಹಾಗು ಶೇಖಡಾ **75%** ರಷ್ಟು ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಮೇಲ್ಕಂಡ ಗಿಡಗಳಿಗೆ ಯೋಗ್ಯ ಧಾರಣೆಯು ಬಾರದಿದ್ದಲ್ಲಿ ಟೆಂಡರ: ಬಹಿರಂಗ ಹರಾಜು ದರ ಸ್ವಿಕರಿಸುವ ಅಥವಾ ನೀರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.

5. ತಾವು ಸಂದಾಯ ಮಾಡಿದ ಸುರಕ್ಷಾ ಠೇವಣಿ ಹಣವನ್ನು ಗಿಡಗಳನ್ನು ತೆಗೆದುಕೊಂಡು ಹೋದನಂತರ ತಮಗೆ ಹಿಂತಿರುಗಿಸಲಾಗುವದು. ಟೆಂಡರನಲ್ಲಿ ಭಾಗವಹಿಸಿ ಟೆಂಡರನಲ್ಲಿ ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಪಸಲಿನ ಹಣವನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ತುಂಬಿ ಪಸಲು ತೆಗೆದುಕೊಂಡು ಹೋಗುವ ಅನುಮತಿ ಪಡೆದ ನಂತರವು ಗಿಡಗಳ ವಿಲೇವಾರಿಗೆ ಏನಾದರು ತೊಂದರೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸಲಾಗುವದಿಲ್ಲಾ.

6. ನಿಯಮಾನುಸಾರ ಸರಕಾರಕ್ಕೆ ತುಂಬಬೇಕಾದ (Income tax, CGST and SGST) ಮತ್ತು ಅರಣ್ಯ ಇಲಾಖೆಗೆ ತುಂಬ ಬೇಕಾದ ಹಣದ ಡಿಡಿ ಯನ್ನು **ನಿಗದಿತ ತಿಳಿಸಿದ ಸಮಯದೊಳಗೆ ತುಂಬಬೇಕು** ಮತ್ತು ರಶೀದಿಗಳನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಬೇಕು ಮತ್ತು ಮಾಲನ್ನು ಸಾಗಿಸುವಾಗ ಅರಣ್ಯ ಇಲಾಖೆಯ ನಿಯಮದಂತೆ ಕ್ರಮ ವಹಿಸಿ ಪಾಸ ಪಡೆದು ಜರಾಕ್ಸ ಪ್ರತಿಗಳನ್ನು ಉದ್ಯಾನ ಇಲಾಖೆಗೆ ಸಲ್ಲಿಸಿ ಕಟ್ಟಿಗೆ ತೆಗೆದುಕೊಂಡು ಹೋಗಬೇಕು.

7. ಗಿಡಗಳನ್ನು ಕಟಾವು ಮಾಡಿಕೊಂಡು ತೆಗೆದುಕೊಂಡು ಹೋಗುವಾಗ ಏನಾದರು ಅನಾಹುತ ಸಂಭವಿಸಿದಲ್ಲಿ ಕ.ವಿ.ವಿ. ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯಕ್ಕೆ ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು, ಪಸಲು ತೆಗೆದುಕೊಂಡವರು ತಾವೇ ಪಸಲನ್ನು ಕಾಯಬೇಕು, ಟೆಂಡರ ನಡೆಯುವ ಸಮಯದಲ್ಲಿ ಶಾಂತತೆ ಕಾಪಾಡುವದು ತುಂಬಾ ಅವಶ್ಯ, ಟೆಂಡರ ಪ್ರಕ್ರಿಯಲ್ಲಿ ಶಾಂತತೆ ಕಾಪಾಡದಿದ್ದರೆ ಮತ್ತು ಏನಾದರ ತೊಂದರೆ ಯಾದಲ್ಲಿ ಟೆಂಡರನ್ನು ರದ್ದುಗೊಳಿಸಲಾಗುವದು ಇದಕ್ಕೆ ತಮ್ಮ ತಕಾರರಗಳನ್ನು ಪರಿಗಣಿಸಲಾಗುದಿಲ್ಲಾ.

ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆಯಲ್ಲಿ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು.(ಮೂ.ನಂ. 8762270302)

A-Chnnnn

ಕುಲಸಚಿವರು

Scanned with OKEN Scanner